ದಿನಾಂಕ 04.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ.ಡಿ.ಡಿ. ವಕೀಲರಿಂದಃ-**

ದಾವಾ ಸ್ವತ್ತಿನಿಂದ ನಮ್ಮ ವಾಸದ ಮನೆಗೆ 2 ಕಿ.ಮೀ. ಅಂತರವಿದೆ. ನಿಶಾನೆ ಪಿ. 11 ರ ತಂತಿ ಬೇಲಿ ಹಾಕಿರುವ ಜಾಗದ ಸರ್ವೆ ನಂಬರ ಮತ್ತು ಅದರ ಪಕ್ಕದ ಜಮೀನಿನ ಸರ್ವೆ ನಂಬರ ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಮೂಲ ಸರ್ವೆ ನಂಬರ 163/1. ಸದರಿ ಸ್ವತ್ತಿನ ಜಮಾಬಂಧಿ ನಮ್ಮ ಕುಟುಂಬದ ಪಟ್ಟೇದಾರರಾದ ಚಿಮ್ಮಚ್ಚಿ ರ ಚಂಗಪ್ಪ ರವರ ಹೆಸರಿನಲ್ಲಿ ಇತ್ತು. ಸರ್ವೆ ನಂ. 163/2 ಯಾರ ಹೆಸರಿನಲ್ಲಿ ಪೋಡಿಯಾಗಿರುತ್ತದೆ ಎಂಬುದು ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ನನ್ನ ತಂದೆಯಿಂದ ತಾಯಿಗೆ ಹಾಗೂ ತಾಯಿಯಿಂದ ನನಗೆ ವರ್ಗಾವಣೆಯಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ದಾಖಲೆಗಳು ಇರುವುದಿಲ್ಲ.

ಸರ್ವೆ ನಂ. 163/1 ರ ಸ್ವತ್ತು ಕುಟುಂಬದ ಸದಸ್ಯರ ಮಧ್ಯೆ ನೋಂದಾಯಿತ ವಿಭಾಗ ಪತ್ರದ ಮೂಲಕ ಹಂಚಿಕೆಯಾಗಿರುವುದಿಲ್ಲ. ಆದರೆ, ನೋಂದಾಯಿತವಲ್ಲದ ವಿಭಾಗಪತ್ರದ ಮೂಲಕ ಹಂಚಿಕೆಯಾಗಿರುತ್ತದೆ. ನನ್ನ ಅಜ್ಜನ ಹೆಸರು ತಮ್ಮಯ್ಯ. ನನ್ನ ತಂದೆಯ ಹೆಸರು ಪೆಮ್ಮಯ್ಯ, ಅವರಿಬ್ಬರೂ ಮೃತರಾಗಿರುತ್ತಾರೆ. ನನ್ನ ತಾಯಿ ಜೀವಂತವಾಗಿದ್ದಾರೆ. ನನಗೆ ಒಬ್ಬಳು ತಂಗಿ ಇದ್ದಾಳೆ. ಆಕೆಗೆ ದಾವಾ ಸ್ವತ್ತಿನಲ್ಲಿ ಭಾಗಂಶ ನೀಡಿರುವುದಿಲ್ಲ. ಸಾಕ್ಷಿಯು

ಮುಂದುವರೆದು, ಅವರು ಭಾಗಂಶ ನೀಡುವಂತೆ ಕೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ನಿಶಾನೆ ಪಿ. 14 ರಲ್ಲಿ ನಮೂದಿಸಿರುವ ಸ್ವತ್ತುಗಳ ಮೇಲೆ ನನ್ನ ಮಗನಿಗೂ ಹಕ್ಕು ಇದೆ. ನಿಶಾನೆ ಪಿ. 14 ರಲ್ಲಿ ನಮೂದಿಸಿರುವಂತೆ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿಯನ್ನು ವಿಚಾರಿಸಿ, ಅವರ ಬಳಿ ಇದ್ದರೆ ಹಾಜರುಪಡಿಸುತ್ತೇನೆ ಎಂದು ಉತ್ತರಿಸಿರುತ್ತಾರೆ. ಚಿಮ್ಮಚ್ಚಿ ರ ಕುಟುಂಬದ ಸದಸ್ಯರು ತಮ್ಮ ಕುಟುಂಬದ ಸ್ವತ್ತುಗಳಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಸ್ವಾ ಧೀನದಲ್ಲಿ ಇದ್ದಾರೆ ಎಂದರೆ ಸರಿ.

ದಾವಾ ಸ್ವತ್ತಿನ ಪೂರ್ವಕ್ಕೆ ಕೆರೆ ತೆಗೆಯುವ ಮೊದಲು ರಸ್ತೆ ಇರಲಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿಸಿರುತ್ತೇನೆ. ಅದರ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ದಾವಾ ಸ್ವತ್ತನ್ನು ಯಾವತ್ತೂ ಅಳತೆ ಮಾಡಿಸಿಲ್ಲದೇ ಇರುವುದರಿಂದ, ಅದರ ಚೆಕ್ಕು ಬಂಧಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ. 10 ರಲ್ಲಿ ಕಾಣುವ ಕಾಲುವೆ ಪ್ರತಿವಾದಿಯ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಮತ್ತು ಮರು ಸಂವಾದ (ಖಿಜರಿಳುಟಜಜಡಿ) ಪತ್ರದಲ್ಲಿ ತಿಳಿಸಿರುವ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.